ಓ.ಎಸ್.ನಂ.298/2016

ಪಿ.ಡಬ್ಲ್ಯೂ:1

**ದಿನಾಂಕಃ14-02-2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ವೈ.ಟಿ.ಎಂ., ವಕೀಲರಿಂದಃ**

ನನ್ನ ಮದುವೆಯಾಗಿ 45 ವರ್ಷವಾಗಿರುತ್ತದೆ. ನನಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. 2 ನೇ ಪ್ರತಿವಾದಿ ಮಗಳನ್ನು ನನ್ನ ಮಗನಿಗೆ ಸುಮಾರು 12 ವರ್ಷಗಳ ಹಿಂದೆ ಮದುವೆ ಮಾಡಿಕೊಂಡಿದ್ದೇವೆಂದರೆ ಸರಿ. ನನಗೂ 1 ನೇ ಪ್ರತಿವಾದಿಗೂ ಮಾತುಕತೆ ಇಲ್ಲ ವೈಮನಸ್ಸು ಇದೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ನನ್ನೊಂದಿಗೆ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿಯಲ್ಲ. 2 ಮತುತ 3 ನೇ ಪ್ರತಿವಾದಿಯ ಮಾತುಕೇಳಿ 2 ನೇ ಪ್ರತಿವಾದಿಗೆ ಅನುಕೂಲ ಮಾಡಿಕೊಡಲು ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿ ಸುಮಾರು 7-8 ವರ್ಷಗಳಾಗಿರುತ್ತದೆ. ನನ್ನ ತಾಯಿ ಮರಣ ಹೊಂದಿ ಸುಮಾರು 6-7 ವರ್ಷಗಳಾಗಿರುತ್ತದೆ. 2 ನೇ ಪ್ರತಿವಾದಿಯ ಮಗಳನ್ನು ನನ್ನ ಮಗನಿಗೆ ಮದುವೆ ಮಾಡಿಕೊಳ್ಳುವ ಕಾಲಕ್ಕೆ ಪ್ರತಿವಾದಿಗಳು ಬೇರೆ ಬೇರೆಯಾಗಿದ್ದರು. 2 ನೇ ಪ್ರತಿವಾದಿ ಮಗಳನ್ನು ನನ್ನ ಮಗನಿಗೆ ಮದುವೆ ಮಾಡಿಕೊಡುವ ಕಾಲಕ್ಕೆ ಪ್ರತಿವಾದಿಗಳು ನಮ್ಮ ಕುಟುಂಬದ ಆಸ್ತಿಗಳನ್ನು ಬೇರೆ ಬೇರೆಯಾಗಿ ಹಿಸ್ಸೆ ಮಾಡಿಕೊಂಡು ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿಯ ಜೀವನ ನಿರ್ವಹಣೆಯನ್ನು ಅವರ ಜೀವಿತ ಕಾಲದಲ್ಲಿ 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು.

ನನ್ನ ತಂದೆಯ ತಂದೆಗೆ ನನ್ನ ತಂದೆ ಸಣ್ಣತಿಮ್ಮಪ್ಪ ಮತ್ತು ದಾಸಪ್ಪ ಎಂಬ ಇಬ್ಬರೇ ಮಕ್ಕಳು. 1992-93 ರಲ್ಲಿ ನನ್ನ ತಂದೆ ಸಣ್ಣತಿಮ್ಮಪ್ಪ ಮತ್ತು ದಾಸಪ್ಪ ಹಾಗೂ ಪ್ರತಿವಾದಿಗಳ ನಡುವೆ ಎಂಆರ್ ನಂ.20/1992-93 ರಂತೆ ಕುಟುಂಬದ ಆಸ್ತಿಗಳು ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮದುವೆ ಸಮಯದಲ್ಲಿ ಆಸ್ತಿಗಳ ಬಾಬ್ತು ನನಗೆ ಹಣ ಮತ್ತು ಒಡವೆ ನೀಡಿದ್ದರಿಂದ ವಿಭಾಗದ

ಸಮಯದಲ್ಲಿ ನನ್ನ ಹೆಸರನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂದಿಸಿದಂತೆ 1992-93 ರಲ್ಲಿ ಆದ ವಿಭಾಗದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 1992-93 ರ ವಿಭಾಗದಂತೆ ಪ್ರತಿವಾದಿಗಳು ಅಂದಿನಿಂದಲೂ ಆಸ್ತಿಗಳ ಪ್ರತ್ಯೇಕ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. 1992-93 ರ ವಿಭಾಗದಂತೆ ನನ್ನ ಚಿಕ್ಕಪ್ಪ ದಾಸಪ್ಪರವರಿಗೆ ಸ.ನಂ.1/ಪಿನಲ್ಲಿ 25 ಗುಂಟೆ, ಸ.ನಂ.42/3 ರಲ್ಲಿ 1 ಎಕರೆ 15 ಗುಂಟೆ, ಸ.ನಂ.50/6 ರಲ್ಲಿ 24 ಗುಂಟೆ, ಸ.ನಂ.74/1 ಪಿ ನಲ್ಲಿ 2 ಎಕರೆ 13 ಗುಂಟೆ, ಮತ್ತು ಸ.ನಂ.74/1 ರಲ್ಲಿ 1 ಎಕರೆ 2 ವರೆ ಗುಂಟೆ ಜಮೀನನ್ನು ನೀಡಿದ್ದಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹಿಸ್ಸೆಗೆ ಸ.ನಂ.1/ಪಿ ನಲ್ಲಿ 9 ಗುಂಟೆ, ಸ.ನಂ.42/3 ಪಿ ನಲ್ಲಿ 18 ಗುಂಟೆ, ಸ.ನಂ.74/1 ರಲ್ಲಿ 36 ಗುಂಟೆ, ಸ.ನಂ.74/ಪಿ ರಲ್ಲಿ 22 ವರೆ ಗುಂಟೆ ಹಿಸ್ಸೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಪ್ರತಿವಾದಿ ಹಿಸ್ಸೆಗೆ ಸ.ನಂ.1/ಪಿನಲ್ಲಿ 8 ಗುಂಟೆ, ಸ.ನಂ.42/3 ರಲ್ಲಿ 18 ಗುಂಟೆ, ಸ.ನಂ.74/1 ಪಿ ನಲ್ಲಿ 8 ಗುಂಟೆ, ಮತ್ತು ಸ.ನಂ.74/1 ರಲ್ಲಿ 20 ಗುಂಟೆ, ಸ.ನಂ.108 ರಲ್ಲಿ 20 ಗುಂಟೆ, ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ 3 ನೇ ಪ್ರತಿವಾದಿ ಹಿಸ್ಸೆಗೆ ಸ.ನಂ.1/ಪಿನಲ್ಲಿ 8 ಗುಂಟೆ, ಸ.ನಂ.42/3 ರಲ್ಲಿ 19 ಗುಂಟೆ, ಸ.ನಂ.50/6 ರಲ್ಲಿ 24 ಗುಂಟೆ, ಸ.ನಂ.74/ಪಿ ನಲ್ಲಿ 28 ಗುಂಟೆ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ರ ಆಸ್ತಿ ನನ್ನ ತಂದೆ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ತಂದೆ ಮತ್ತು ತಾಯಿಯ ಹಿಸ್ಸೆಗೆ ಬಿಡಲಾಗಿತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಓಂಕಾರಪ್ಪರವರ ಹಿಸ್ಸೆಗೆ ಬಂದಿದ್ದ ಸ.ನಂ.1/1 ರಲ್ಲಿ 8 ಗುಂಟೆ ಜಮೀನನ್ನು ದಿ:29-10-1997 ರಂದು ಎಸ್.ಆರ್ ನಂ.1875/1997-98 ರಂತೆ ಯರೆಹಳ್ಳಿ ಗ್ರಾಮದ ವಾಸಿ ರಾಜಪ್ಪ ಬಿನ್ ಬಸಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ 2 ನೇ ಪ್ರತಿವಾದಿ ಓಂಕಾರಪ್ಪರವರ ಹಿಸ್ಸೆಗೆ ಬಂದಿದ್ದ ಸ.ನಂ.74/1 ರಲ್ಲಿ 20 ಗುಂಟೆ

ಜಮೀನನ್ನು ದಿಃ24-04-2004 ರಂದು ಎಸ್.ಆರ್ ನಂ.135/2004-05 ರಂತೆ ನನ್ನ ಚಿಕ್ಕಪ್ಪ ದಾಸಪ್ಪರವರ ಮಗ ಚಂದ್ರಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ಓಂಕಾರಪ್ಪರವರ ಹಿಸ್ಸೆಗೆ ಬಂದಿದ್ದ ಸ.ನಂ.74/1 ರಲ್ಲಿ 4 ಗುಂಟೆ ಜಮೀನನ್ನು 2 ವರ್ಷಗಳ ಹಿಂದೆ ಯರೆಹಳ್ಳಿ ಗ್ರಾಮದ ವಾಸಿ ಕರಿಯಪ್ಪರವರ ಮಕ್ಕಳಾದ ನಾಗರಾಜಪ್ಪ ಮತ್ತು ಗೋವಿಂದ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿ ನಾಗರಾಜಪ್ಪರವರ ಹಿಸ್ಸೆಗೆ ಬಂದಿದ್ದ ಸ.ನಂ.50/6 ರಲ್ಲಿ 24 ಗುಂಟೆ ಜಮೀನನ್ನು ದಿಃ25-03-2009 ರಂದು ಎಸ್.ಆರ್ ನಂ.3320/2008-09 ರಂತೆ ಇಂಗ್ಲಾರನಹಳ್ಳಿ ಗ್ರಾಮದ ವಾಸಿ ಮಲ್ಲಪ್ಪ ಬಿನ್ ಗಿಡ್ಡಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

3 ನೇ ಪ್ರತಿವಾದಿ ನಾಗರಾಜಪ್ಪರವರ ಹಿಸ್ಸೆಗೆ ಬಂದಿದ್ದ ಸ.ನಂ.74/1 ರಲ್ಲಿ 4 ಗುಂಟೆ ಜಮೀನನ್ನು ಒಂದು ವರ್ಷದ ಹಿಂದೆ ಯರೇಹಳ್ಳಿ ಗ್ರಾಮದ ವಾಸಿ ಅಶೋಕ ಬಿನ್ ಸಗುಣಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳಾಗಿದ್ದವು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಅವರ ಹಿಸ್ಸೆಗೆ ಬಂದಿದ್ದ ಆಸ್ತಿಗಳನ್ನು ಮಾರಾಟ ಮಾಡಿಕೊಂಡಿದ್ದು 1 ನೇ ಪ್ರತಿವಾದಿ ತನ್ನ ಹಿಸ್ಸೆಗೆ ಬಂದ ಆಸ್ತಿಗಳನ್ನು ಉಳಿಸಿಕೊಂಡಿರುವ ಕಾರಣ ದುರುದ್ದೇಶದಿಂದ ಈ ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಆಸ್ತಿಗಳನ್ನು ಮಾರಟ ಮಾಡಿದ್ದ ವಿಚಾರ ತಿಳಿದಿದ್ದರೂ ಸಹ 2 ನೇ ಪ್ರತಿವಾದಿ ಮಗಳನ್ನು ನನ್ನ ಮಗನಿಗೆ ಮದುವೆ ಮಾಡಿಕೊಂಡಿರುವ ಕಾರಣ ಸದರಿ ಆಸ್ತಿಗಳನ್ನು ಖರೀದಿಸಿದವರನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಮಗ ಪೊಲೀಸ್ ಇಲಾಖೆಯಲ್ಲಿ ನೌಕರ ಎಂದರೆ ಸರಿ. ನನ್ನ ಮಗನಿಗೆ ಮದುವೆ ಮಾಡಿಕೊಂಡಿರುವ 2 ನೇ ಪ್ರತಿವಾದಿಯ ಮಗಳು

ವಿದ್ಯಾವಂತೆ ಎಂದರೆ ಸರಿ. 1 ನೇ ಪ್ರತಿವಾದಿಯು ಅನಕ್ಷರಸ್ತನಾದ ಕಾರಣ ಅವನಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿ ನನ್ನ ತಂದೆ ಹಿಸ್ಸೆಗೆ ಬಂದಿದ್ದು ನನ್ನ ತಂದೆಯನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದ ಕಾರಣ 1 ನೇಪ್ರತಿವಾದಿಗೆ ಸದರಿ ಆಸ್ತಿಯನ್ನು ದಿಃ05-06-2007 ರ ಮರಣ ಶಾಸನ ಪತ್ರದ ಮೂಲಕ ನೀಡಿದ್ದಾರೆ ಎಂದರೆ ಗೊತ್ತಿಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರಃದಃನ್ಯಾಃದಂ.,ರವರು,
ಕಡೂರು.